Doc. 539
T-P-2

(1)

Reg no KKVN 12 - For Influential Publicity - 29-9-75

ಕೃಷ್ಣ ಮಹೋತ್ಸವ ವಿರಮಣ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60 th Diamond Jubilee Year
ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸ್ಥಾಪಕರು : ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಕಾರ್ಯನಿರತ ಎಂ. ಎಸ್. ಕೃಷ್ಣರಾವ್ 15 ಪೈಸೆ

ದಸರಾ ವಸ್ತುಪ್ರದರ್ಶನ ಉದ್ಘಾಟನೋತ್ಸವ

ಮೈಸೂರು — ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಿಯವರಾದ ಶ್ರೀ ರಾಜಬಹದ್ದೂರ್‌ರವರು ಈ ದಿನ ಬೆಳಿಗ್ಗೆ 12 ಗಂಟೆಗೆ ಮೈಸೂರು ದಸರಾ ವಸ್ತುಪ್ರದರ್ಶನವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ದೊಡ್ಡಕೆರೆಯ ವಿಶಾಲವಾದ ಆವರಣದಲ್ಲಿ ಶ್ರೀಗಳಾದ ಎಫ್ ಕೆ ಇರಾನಿ, ಡಿ. ಜಯದೇವರಾಜ ಅರಸು, ಬಿ. ಪಿ ಲಿಂಗಯ್ಯ, ಬಿ ಎನ್. ಕೆಂಗೇಗೌಡ ಮುಂತಾದ ಗಣ್ಯರ ಸಾಹಸ, ಸರ್ಕಾರದ ನೆರವು ಇವರಿಂದ ತಲೆಯೆತ್ತಿದ ಮೈಸೂರು ದಸರಾ ವಸ್ತುಪ್ರದರ್ಶನವನ್ನು ಶ್ರೀ ರಾಜಬಹದ್ದೂರ್‌ರವರು ಉದ್ಘಾಟಿಸಿ ಭಾಷಣ ಮಾಡಿ, ಪ್ರಧಾನಿಯವರು ರಾಷ್ಟ್ರದ ಮುಂದೆ ಇಟ್ಟಿರುವ ಇಪ್ಪತ್ತು ಅಂಶಗಳ ಪ್ರಣಾಳಿಕೆ, ರಾಜಕೀಯ ಉದ್ದೇಶವನ್ನೆಯಲ್ಲ, ಕೇವಲ ಕಾರ್ಯಕ್ರಮವಲ್ಲ, ಅದರಿ ದೇಶದ ಆರ್ಥಿಕ ಪರಿಸ್ಥಿತಿಯನ್ನೇ ಬದಲಾವಣೆ ಮಾಡುವ ಮಹಾ ಸಾಧನೆ ಎಂಬುದಾಗಿ ತಿಳಿಸಿದರು ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಪುನರಂಜನೆಯೊಡನೆ ವಸ್ತುಪ್ರದರ್ಶನ ಬೋಧಪ್ರದವಾಗಿರಬೇಕು ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸಾರಿಗೆ ಮಂತ್ರಿಯವರಾದ ಶ್ರೀ ಮಹಮದ್ ಅಲಿ ಮೆಹತಾಬ್ ಅಲಿಯವರು ಭಾಷಣ ಮಾಡುತ್ತಾ, ವಸ್ತುಪ್ರದರ್ಶನ ಸಂಗಡ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿರುವುದು ಹರ್ಷದ ಸಂಗತಿ ಎಂದರು

ಸಮಿತಿ ಅಧ್ಯಕ್ಷರಾದ ಶ್ರೀ ಎಫ್ ಕೆ ಇರಾನಿಯವರು ಸ್ವಾಗತ ಭಾಷಣ ಮಾಡಿದರು ಶ್ರೀ ಸುಬ್ಬರಾವ್‌ರವರು ವರದಿ ಓದಿದರು ಶ್ರೀ ಬಿ ಪಿ ಲಿಂಗಯ್ಯನವರು ವಂದನಾರ್ಪಣೆ ಮಾಡಿದರು.

★

ಸಂಸ್ಕೃತದಲ್ಲಿ ಕಾರ್ಡ್

ಶ್ರೀನಗರ— ಪವಿತ್ರ ರಾಮಾಯಣವನ್ನು 72000 ಸಂಸ್ಕೃತ ಶ್ಲೋಕಗಳಲ್ಲಿ ಹರಿಯಾಣದ ಯಮುನಾನಗರದ ಪ್ರೊ | ಸತದರ ವರ್ಮರು ಬರೆದಿದ್ದು ಅದರ ಪ್ರಕಟಣೆಗೆ ಸಹಾಯ ಕೋರಿದ್ದಾರೆಂದು ಜಮ್ಮು-ಕಾಶ್ಮೀರದ ಸಾಂಸ್ಕೃತಿಕ ಸಂಸ್ಥೆಯನ್ನು ಕೇಳಿಯವರೆನ್ನಲಾಗಿದೆ

★

ನನ್ನನ್ನು ಶ್ರೀಮತಿ ಎಂದು ಕರೆಯಿರಿ

ಪುಣೆ — ಇಲ್ಲಿ ನಡೆದ ಮಹಿಳಾ ಸಮ್ಮೇಳನವು " ನನ್ನನ್ನು ಶ್ರೀಮತಿ " ಎಂದು ಕರೆಯಿರಿ, ಗೌರವ ಅಥವಾ ಸೌಭಾಗ್ಯವತಿ ಎನ್ನುವದು ಬೇಡ. ಯಾಕೆಂದರೆ ನನ್ನ ಮದುವೆ ಘನವಾನ ನಿನುಗೆ ಸಂಬಂಧಿಸಿದ್ದಲ್ಲ, ಅದು ನನ್ನದು ಎಂದು ಸಮಾಜಕ್ಕೆ ಸೂಚಿಸಿದೆ.

○

ನಾಗರಕೋಯಿಲ್ — ಕುಜಿತಾರ್ಪ ದೇವಸ್ಥಾನದ ಆನೆ ಗೋಪಾಲನ್ 6 ದಿನಗಳ ವರೆಗೆ ಆಹಾರ ನೀರು ತಿರಸ್ಕರಿಸಿ ನಂತರ ಸೇವಿಸಿತು ಅದರ ಮಾವುತ ಕೃಷ್ಣ ಹತ್ತಾತ್ಮನೆ ಪತ್ತಿದ್ದಕ್ಕೆ ಅನೆಗೆ ತುಂಬಾ ವ್ಯಸನವಾಯಿತು ದೇವಾಲಯ ಅಧಿಕಾರಿಗಳು ಈ ಕುರಿತು ಸಂತಾಪಿಸಿದರು.

ತುರ್ತು ಪರಿಸ್ಥಿತಿಗೆ ಕಾರಣ

ಜಯಪುರ — ದೇಶದಲ್ಲಿ ಅನಾಯಕತೆ ಜರುಗಲಿದ್ದುದು ತುರ್ತು ಪರಿಸ್ಥಿತಿ ತರುವುದಕ್ಕೆ ಬಲಾತ್ಕರಿಸಿತು ಸರ್ಕಾರ ಉರುಳಿಸುವ ಮೊದಲನೆ ಸಾವಯೂಹಿಕ ಪ್ರಯತ್ನ 1974 ರಲ್ಲಿ ಗುಜರಾತಿನಲ್ಲಿ ಹಿಂಸಾತ್ಮಕ ರೀತಿಯಲ್ಲಿ ನಡೆಯಿತು ಎಂದು ಕೇಂದ್ರ ಮೀಸಲು ದಳದ ಡೈರೆಕ್ಟರ್ ಜನರಲ್ ಶ್ರೀ ಸಕ್ಸೇನಾ ಈ ಸಂಬಂಧದ ಸೆಮಿನಾರ್‌ನಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

★

ಸ್ಮರಣ ಮೆರವಣಿಗೆ

ಚಿಲಿಯ ಮಾಜಿ ರಕ್ಷಣಾ ಮಂತ್ರಿ ಬಾಂಬು ಸಿಡಿತದಿಂದ ನಿಧನರಾದುದರ ವಿಚಾರದಲ್ಲಿ ಇತ್ತೀಚೆಗೆ 2 ವರೆ ಸಾವಿರ ಜನರ ಸ್ಮರಣ ಮೆರವಣಿಗೆ ನಡೆಸಿದ್ದರು.

●

ಕಾಂಗ್ರೆಸಿನ ಇತಿಹಾಸ

ನವ ದೆಹಲಿ — ಕಾಂಗ್ರೆಸಿನ ಇತಿಹಾಸವನ್ನು 5 ಸಾವಿರ ಪುಟಗಳಲ್ಲಿ 5 ಸಂಪುಟಗಳಲ್ಲಿ ಬರೆಯುವ ಅಶಂಡಾಯಕ ಸಾಹಿತ್ಯ ಪ್ರಾರಂಭಿಸಲಾಗಿದೆ. 1985 ಶತಮಾನೋತ್ಸವ ವೇಳೆಗೆ ಮುಗಿಯುವುದು

★

ಶಾಸನ ತರುವ ಭರವಸೆ

ಬೆಂಗಳೂರು — ಮದ್ಯಪಾನ ಮಾಡಿ ವಾಹನ ನಡೆಸುವುದು ಅಪರಾಧವೆಂದು ಶಾಸನ ತರುವ ಸಲಹೆಯನ್ನು ಸಹಕಾರ ಮಂತ್ರಿ ಶ್ರೀ ಕೆ ಹೆಚ್ ರಂಗನಾಥ್‌ರು ಸಂಚಾರ ಸಪ್ತಾಹ ಭಾಷಣದಲ್ಲಿ ತಿಳಿಸಿದರು.

●

● ಬೊಂಬಾಯಿನ ಓವರ್‌ವಾಣಿಜ್ಯೋದ್ಯಮಿ ಮನೆ ಶೋಧನೆ ಮಾಡಿದವರು 1 ಲಕ್ಷ ರೂ. ವಿದೇಶಿ ಹಣವನ್ನು ವಶಪಡಿಸಿಕೊಂಡರು.

ಇಂದು "ಸತ್ಯವಾದಿ" ಸ್ಥಾಪಕರ ದಿನಾಚರಣೆ

ಮೀಸಲಿಡಲು ಸರ್ಕಾರದ ಸೂಚನೆ

ಗುಲ್ಬರ್ಗ — ನೆರವನ್ನು ಪಡೆದ ಶಾಲೆಗಳಲ್ಲಿ ಶೇಕಡ 49 ಕೆಲಸಗಳನ್ನು ಪರಿಶಿಷ್ಟ ಕೋಮು ಹಾಗೂ ಜನಾಂಗಕ್ಕೆ ಮೀಸಲಿಡಲು ಸರ್ಕಾರ ಸೂಚಿಸಿದೆ ಎಂದು ಮಂತ್ರಿ ಶ್ರೀ ಖಾರ್ಗೆ ತಿಳಿಸಿದರು.

○

ಮಾಜಿ ಪ್ರಧಾನರು ಇಂದು ಭಿಕ್ಷುಕರು

ಬ್ಯಾಂಗ್‌ಕಾಕ್ — ಈಚೆಗೆ ಸನ್ಯಾಸಿಯಾದ ಮಾಜಿ ಪ್ರಧಾನಿ ಥಾನಂ ಕಿಟಿಕಾಚರನ್ನರು ತಲೆ ಬೋಳಿಸಿಕೊಂಡು ಬೌದ್ಧ ಸನ್ಯಾಸಿಯ ಉಡುಪು ಧರಿಸಿ ಇತರ ಸನ್ಯಾಸಿಗಳೊಡನೆ ಭಿಕ್ಷೆ ಬೇಡುತ್ತಿರುವರು ಈ ರೀತಿ ಸಿಪಾಯಿಗಳು ಅವರ ದಿನದ ಆಹಾರವನ್ನು ಭಿಕ್ಷೆಯಿಂದ ಪಡೆಯಬೇಕು.

★

ಕಠಿಣ ಸಜೆ

ಟೋಕಿಯೋ — ರಸ್ತೆಗಳಲ್ಲಿ ಚಕ್ರವರ್ತಿ ಹಿರೋಹಿಟೋ ಮತ್ತು ತರ ಚಕ್ರವರ್ತಿ ವಾನೆಕನದವರ ಬಗ್ಗೆ ಅಶ್ಲೀಲ ಚಿತ್ರಗಳ ಪಟ್ಟಿಕೆ ಮಾಡುತ್ತಿದ್ದ ಕೆನ್ಸೊಓಕುಜಾಕೆಗೆ 4 ತಿಂಗಳು ಕಠಿಣ ಸಜೆ ವಿಧಿಸಲಾಗಿದೆ.

ಪತ್ನಿಯ ಸಾವು

ಸಿರಸಿಯಿಂದ ಬಂದ ವರದಿ ಪ್ರಕಾರ ಉಂಬೆಳ್ಳ ಹತ್ತಿರ ರಾಜ್ಯ ಸಾರಿಗೆ ಬಸ್ ಪ್ರಾಥಮಿಕ ಶಾಲೆ ಉಪಾಧ್ಯಾಯನಿ ಶ್ರೀಮತಿ ಸಾರ್ವತಿ ಮೇಲೆ ಹರಿದು ಅವರು ಪತ್ತರು ಸಂಡಲ್ಲೆ ಹೋಗುತ್ತಿದ್ದ ಅವರ ಪತಿ ಶ್ರೀ ಮಂಜುನಾಥ ಭಾಗವತರು ಸ್ವಲ್ಪ ಗಾಯಗೊಂಡು, ಸಪ್ಪಿಸಿಕೊಂಡರು.

(2)

ಉಪಾಧ್ಯಾಯರ ಹೊಣೆಗಾರಿಕೆ

ಮಂಡ್ಯ — ರಾಜ್ಯದಲ್ಲಿ ವಿದ್ಯಾಭ್ಯಾಸದ ಮಟ್ಟ ಕುಂಭಾ ಕೆಳದರ್ಜೆಯಲ್ಲಿರುವ ಕುರಿತು ವಿದ್ಯಾ ಮಂತ್ರಿ ಶ್ರೀ ಯಾಹ್ಯ ಖಾನರು ಉಪಾಧ್ಯಾಯರ ಮೇಲೆ ಹೊಣೆ ಹೊರಿಸಿರುವರು.

★

ನವ ದೆಹಲಿ — ಉಳಿತಾಯ ಭೂವಿ ಹ ಚಿಕ್ಕೆಯಲ್ಲಿ ಪರಿಶಿಷ್ಟ ಕೋಮು ಹಾಗೂ ಜನಾಂಗದ 1 ಲಕ್ಷ ಮಂದಿ ಫಲಾನುಭವಿಗಳು ಹೊಂದಿರುವರು

ಡೆಪ್ಯುಟಿ ಡೈರೆಕ್ಟರ್‌ರವರ ಕಚೇರಿ, ಪ್ರಾಜೆಕ್ಟ್ ಟೈಗರ್,
ಸರ್ಕಾರಿ ಭವನ ಕಾಂಪ್ಲೆಕ್ಸ್, ತಾಲ್ಲೂಕು ಕಚೇರಿ ಹತ್ತಿರ, ಮೈಸೂರು.

ಪ್ರಕಟಣೆ

ನಂ ಡಿಡಿ ಪಿಜೆಟಿ ಇಎಂಟಿ. ಟೆಎನ್‌ಡಿಆರ್/76-77 ತಾ. 16-9-76

ಪೆಡ್ಯೂಲ್‌ನಲ್ಲಿ ಸೂಚಿಸಿರುವ ಕೆಲಸಗಳಿಗಾಗಿ ಕಂಟ್ರಾಕ್ಟರ್‌ಗಳಿಂದ ಅದರಂತೆ ಹೆಸರು ಬರೆದ ಮುಚ್ಚಿದ ಶಕಾಲದಲ್ಲಿ ಸಹಿ ಮಾಡಲಾದ ಮೊಹರಾದ ಟೆಂಡರ್‌ಗಳನ್ನು ಟೆಂಡರ್‌ದಾರರುಗಳಿಂದ ಮೈಸೂರಿನಲ್ಲಿರುವ ಡೆಪ್ಯುಟಿ ಡೈರೆಕ್ಟರ್ ಪ್ರಾಜೆಕ್ಟ್ ಟೈಗರ್ ಇವರಿಂದ 15 ನೇ ಅಕ್ಟೋಬರ್ 76 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸಲಾಗುವುದು. ಸ್ವೀಕರಿಸಲಾದ ಟೆಂಡರ್‌ಗಳನ್ನು ಅದೇ ದಿನ ಮಧ್ಯಾಹ್ನ 4-30 ಗಂಟೆಗೆ ಸಂದರ್ಭಾನುಸಾರ ಟೆಂಡರ ದಾರರು ಅಥವಾ ಅವರ ಪ್ರತಿನಿಧಿಗಳ ಮುಂದೆ ಒಡೆಯಲ್ಪಡುವುದು.

ಪೆಡ್ಯೂಲ್

ಕೆಲಸ ಮುಗಿಸಲು ಕಾಲಾವಧಿ 10 ಮತ್ತು 11 ಕೆಲಸಗಳಿಗೆ 28-2-77 ಮತ್ತು ಉಳಿದ ಕೆಲಸಗಳಿಗೆ 30-3-77.

ಸ್ಲೀ ನಂ	ಕೆಲಸದ ಹೆಸರು	ಅಂದಾಜು ಮೊತ್ತ	ಇ ಎಂ ಡಿ
1	ಬೇಗೂರ್‌ನಲ್ಲಿ ಗಾರ್ಡ್‌ಗಳ ಜೋಡಿ ಕ್ವಾರ್ಟರ್ಸ್ ನಿರ್ಮಾಣ	29,000	1,450
2	ಬೇಗೂರ್ ರೇಂಜ್‌ನ ಮುಬಾರ್ದ್‌ನಲ್ಲಿ ಗಾರ್ಡ್‌ಗಳ ಜೋಡಿ ಕ್ವಾರ್ಟರ್ಸ್ ನಿರ್ಮಾಣ	29,000	1,450
3	ಬೇಗೂರ್‌ನಲ್ಲಿ ಅರಣ್ಯ ಮತ್ತು ಗುಮಾಸ್ತೆಯ ಕ್ವಾರ್ಟರ್ಸ್ ನಿರ್ಮಾಣ	30,000	1,500
4	ಬೇಗೂರ್‌ನಲ್ಲಿ ರೇಂಜ್ ಅರಣ್ಯ ಕಚೇರಿಯ ನಿರ್ಮಾಣ	25,000	1,250
5	ಬೇಗೂರ್ ರೇಂಜ್ ಬನ್ನೂರು ಗದ್ದೆಯಲ್ಲಿ ಬಾವಿ ತೋಡುವುದು	10,000	500
6	ಬೇಗೂರ್ ರೇಂಜ್ ಮುಬರ್ಂದ್ ಬಾವಿಗೆ ಸ್ಟೀನಿಂಗ್ ಮಾಡುವುದು	7,000	350
7	ಬೇಗೂರ್ ರೇಂಜ್ ಬಸವನಗುಡಿಯಲ್ಲಿರುವ ದೇವಾಲಯದ ಬಾವಿಗೆ ಸ್ಟೀನಿಂಗ್ ಮಾಡುವುದು	15,000	750
8	ಬೇಗೂರ್‌ನಲ್ಲಿ ರೇಂಜ್ ಅರಣ್ಯಾಧಿಕಾರಿಯವರ ಕ್ವಾರ್ಟರ್ಸ್ ನಿರ್ಮಾಣ.	40,000	2,000
9	ಬಂಡೀಪುರ ರೇಂಜ್ ವ್ಯಾಂಗಳದಲ್ಲಿ ಅರಣ್ಯ ಗಾರ್ಡ್‌ಗಳಿಗೆ ಜೋಡಿ ಕ್ವಾರ್ಟರ್ಸ್ ನಿರ್ಮಾಣ	28,000	1,400
10	ಬಂಡೀಪುರದ ವನಶ್ರೀ ಲಾಡ್ಜ್‌ನ ಬಾತ್ ರೂಂ ದುರಸ್ತು ಮಾಡುವುದು.	16,000	800
11	ಬಂಡೀಪುರ ರೇಂಜ್‌ನಲ್ಲಿ ರೇಂಜ್ ಅರಣ್ಯ ಕಚೇರಿಗೆ ಕಚೇರಿ ಕೊಠಡಿ ನಿರ್ಮಾಣ	9,450	472
12	ಬೇಗೂರ್ ರೇಂಜ್ ಗುಂಡ್ರೆಯಲ್ಲಿ ಅರಣ್ಯ ಗಾರ್ಡ್‌ಗಳಿಗೆ ಜೋಡಿ ಕ್ವಾರ್ಟರ್ಸ್ ನಿರ್ಮಾಣ	29,000	1,450

ಸೂಚನೆ : ಪ್ರತಿ ಕೆಲಸದ ಎದುರಿಗೆ ನಮೂದಿಸಿರುವ ಅರ್ನೆಸ್ಟ್ ಹಣ ಠೇವಣಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಇದಕ್ಕೆ ಪಾವತಿ ಮಾಡಬೇಕು ಮತ್ತು ದ್ವಿಪ್ರತಿ ಚಲನ್‌ನನ್ನು ಟೆಂಡರ್‌ಗೆ ಲಗತ್ತಿಸಬೇಕು ಅಥವಾ ಪೆಡ್ಯೂಲ್ ಬ್ಯಾಂಕ್‌ನಿಂದ ಮೈಸೂರಿನಲ್ಲಿರುವ, ಡೆಪ್ಯುಟಿ ಡೈರೆಕ್ಟರ್, ಪ್ರಾಜೆಕ್ಟ್ ಟೈಗರ್. ಇವರ ಹೆಸರಿನಲ್ಲಿ ಪಡೆದ ಡಿವಾಂಡ್ ಡ್ರಾಫ್ಟನ್ನು ಟೆಂಡರ್‌ನೊಡನೆ ಲಗತ್ತಿಸಬೇಕು.

2 ರೂ 5 ಇದರೊಡನೆ ಮಾರಾಟ ತೆರಿಗೆ ಮತ್ತು ಅರಣ್ಯ ಅಭಿವೃದ್ಧಿ ತೆರಿಗೆ ಪಾವತಿ ಮಾಡಿದಲ್ಲಿ 15-10-76 ಮಧ್ಯಾಹ್ನ 1 ಗಂಟೆ ವರೆಗೆ ಕೆಲಸದ ಎಲ್ಲ ದಿನಗಳಲ್ಲಿ ಕಚೇರಿ ವೇಳೆಗಳಲ್ಲಿ ಈ ಕಚೇರಿಯಿಂದ ಟೆಂಡರ್ ಫಾರ್ಮ್‌ಗಳನ್ನು ಕೊಡಲಾಗುವುದು.

3 ಕೆಲಸದ ಎಲ್ಲ ದಿನಗಳಲ್ಲಿ ಮೈಸೂರಿನಲ್ಲಿರುವ, ಪ್ರಾಜೆಕ್ಟ್ ಟೈಗರ್, ಡೆಪ್ಯುಟಿ ಡೈರೆಕ್ಟರ್‌ರವರೊಡನೆ ಯಾವುದೇ ವಿವರಗಳನ್ನು ಪಡೆಯಲು ದಯವಿಟ್ಟು ವ್ಯವಹರಿಸಬಹುದು.

ಸಹಿ/- ಡೆಪ್ಯುಟಿ ಡೈರೆಕ್ಟರ್, ಪ್ರಾಜೆಕ್ಟ್ ಟೈಗರ್, ಮೈಸೂರು.

ವುಡ್‌ಲಾಂಡ್ಸ್ 24 9 76 ರಿಂದ

ಅಮೋಘ ಆರಂಭ

ರಂಗೀಲಾ ರತನ್

ಹಿಂದಿ

ಕಲರ್

ರಿಷಿಕಪೂರ್‌ಪರ್ವೀಬಾಬಿ ಅಶೋಕಕುಮಾರ್ ಅಜಿತ್ ಅಭಿನಯ

ದಿನ 3 ಪ್ರದರ್ಶನಗಳು

ಅಪೆರಾ 17 9 76 ರಿಂದ

ವಿಜಯವಾಣಿ

ಶ್ರೀನಾಥ್ ಕಲ್ಪನ ದ್ವಾರಕೀಶ್ ರಾಜಾಶಂಕರ್ ಅಭಿನಯ

ಕನ್ನಡ

ಪ್ರತಿ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ

Edited, Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram, Mysore 4